ಪ್ರತಿ ದಿನ ಮುಂಜಾನೆ ಐದು ಗಂಟೆಗೆ ಹೊರಟು ಬಿಡುವುದಿತ್ತು. ಕಾರಣ, ಬೆಳಗಿನ ಆ ಹೊತ್ತು ಧಗೆ ಇಲ್ಲದೆ ತಣ್ಣನೆಯ ಗಾಳಿ ಬೀಸುತ್ತಿತ್ತು. ಅಷ್ಟು ಹೊತ್ತಿಗೆ ಒಂದಿಷ್ಟು ಬೆಳಕೂ ಮೂಡಿರುತ್ತಿತ್ತು. ಬೆಳಗಿನ ಉತ್ಸಾಹದಲ್ಲಿ ಸೈಕಲ್ ತುಳಿದು, ಎರಡು ಮೂರು ಗಂಟೆ ಹೆಚ್ಚಿನ ದೂರವನ್ನು ಕ್ರಮಿಸಲು ಸಾಧ್ಯವಾಗುತ್ತಿತ್ತು. ಅವರು ಮಧ್ಯಾಹ್ನದ ಊಟ ಮಾಡುತ್ತಿರಲಿಲ್ಲ. ಹೊಟ್ಟೆ ಭಾರವಾದ ಮೇಲೆ ಮಧ್ಯಾಹ್ನದ ಬಿಸಿಲಿನಲ್ಲಿ ಸೈಕಲ್ ನಡೆಸುವುದು ಕಠಿಣವಿತ್ತು. ಹಾಗೆಂದೆ, ಒಂದಿಷ್ಟು ಹಣ್ಣು ಹಂಪಲು ಯಾರಾದರೂ ಕೊಟ್ಟರೆ, ಇಲ್ಲ ಎಲ್ಲಾದರೂ ಸಿಕ್ಕರೆ, ಕೊಂಡು ತಿನ್ನುತ್ತಿದ್ದರು.



ಪುಟಾಣಿ ಭಾವೇಶ್ ಭಾಟಿಯಾ

ಇಡೀ ದಿನ ಸೈಕಲ್ ತುಳಿದ ಮೇಲೆ, ರಾತ್ರಿ ಎಲ್ಲಿಲ್ಲದ ಹಾಗೆ ಹಸಿವಾಗುತ್ತಿತ್ತು. ಯಾವ ಊರಿನಲ್ಲಿ ಅಥವಾ ಹಳ್ಳಿಯಲ್ಲಿ ತಾವು ತಂಗಬೇಕೋ ಅಲ್ಲಿ, ಕಣ್ಣಿಗೆ ಬಿದ್ದ ಮೊದಲ ಡಾಬಾದಲ್ಲಿ ಊಟ ಮಾಡುತ್ತಿದ್ದರು. ಊರಿನಲ್ಲಿ ಮತ್ಯಾರಾದರೂ ಊಟಕ್ಕೆ ಕರೆದರೆ, ಎರಡನೆ ಬಾರಿ ಊಟ ಮಾಡಲೂ ಸಿದ್ಧರಿರುತ್ತಿದ್ದರು. ಬೆಳೆಯುತ್ತಿದ್ದ ಈ ಯುವಕರ ಜೀರ್ಣಶಕ್ತಿ ಜೋರಿತ್ತು. ಕೈಯಲ್ಲಿ ಹೆಚ್ಚು ಹಣ ಇರಲಿಲ್ಲ. ಅವರ ಪಯಣದ ಹಾದಿ ದೀರ್ಘವಿತ್ತು. ಹಾಗೆಂದೇ ಯಾರಾದರೂ ಪುಕ್ಕಟ್ಟೆ ಊಟ ಹಾಕಿದರೆ, ನಾಷ್ಟಾ ಮಾಡಲು ಆಹ್ವಾನಿಸಿದರೆ ಕೃತಜ್ಞತೆಯಿಂದ ಸ್ವೀಕರಿಸುತ್ತಿದ್ದರು.

ಸೈಕಲ್ಲಿನ ಮೇಲಿದ್ದ ಫಲಕವನ್ನು ಓದಿದ ಬಹಳ ಜನ, ಅವರ ಯಾತ್ರೆಗೆ ತಮ್ಮ ಸಣ್ಣ ಸಹಾಯವಿರಲಿ ಎಂದು ಊಟ ತಿಂಡಿ ನೀಡುತ್ತಿದ್ದರು. ಅವರ ಯಾತ್ರೆಯ ವಿಷಯ ತಿಳಿದ ಮೇಲೆ ಬಹಳಷ್ಟು ಡಾಬಾವಾಲಗಳು ಅವರು ತಿಂದು ಉಂಡದ್ದಕ್ಕೆ ಹಣ ತೆಗೆದುಕೊಂಡಿರಲಿಲ್ಲ. ಆ ರಾತ್ರಿಯನ್ನು ಬಿಲಾಸ್ಪುರದಲ್ಲಿ ಆ ಸಿನಿಮಾ ಮಂದಿರದಲ್ಲಿ ಸೊಳ್ಳೆಗಳೊಡನೆ ಗುದ್ದಾಡುತ್ತ ಕಳೆದಿದ್ದರು. ದಿನೇಶನ ಮುಂಗೈಯಲ್ಲಿದ್ದ ಒಂದು ಗಡಿಯಾರದಿಂದ ಸಮಯ ತಿಳಿಯುತ್ತಿತ್ತು. ಪ್ರತಿದಿನ ಬೆಳಗ್ಗೆ ಅದರಲ್ಲಿ ಇಡುವ ಅಲಾರಾಂನ ಬೀಪ್ ಬೀಪ್ ಕರೆಗೆ ಮೂವರೂ ಏಳುತ್ತಿದ್ದರು. ಆ ರಾತ್ರಿ ಸಿನಿಮಾ ಮಂದಿರದಲ್ಲಿ ಏನಾಯಿತೋ ಗೊತ್ತಿಲ್ಲ, ದಿನೇಶ್ ಗಡಿಬಿಡಿಯಿಂದ ಭಾವೇಶನನ್ನೂ, ಪುರುಷೋತ್ತಮನನ್ನೂ ಎಬ್ಬಿಸಿ 'ಸಮಯವಾಯಿತು ನಡೆಯಿರಿ' ಎಂದ. ಅವರಿಗೆ 'ಈಗಷ್ಟೇ ಮಲಗಿದೆವಲ್ಲ, ಇಷ್ಟು ಬೇಗ ಬೆಳಗು ಆಯಿತೆ' ಅನಿಸಿತ್ತು. ಬಹುಶಃ ಪ್ರವಾಸದ ಆಯಾಸ ನಮ್ಮ ಮೇಲೆ ಪ್ರಭಾವ ಬೀರುತ್ತಿದೆ ಅಂದುಕೊಂಡು, ಇಬ್ಬರೂ ಅರ್ಧ ಗಂಟೆಯಲ್ಲಿಯೇ ಬೇಗ ಬೇಗ ತಯಾರಾಗಿ ಬೀದಿಗೆ ಇಳಿದರು. ಸುಮಾರು ಒಂದೂವರೆ ಗಂಟೆ ಸೈಕಲ್ ತುಳಿದರು. ಆದರೆ ಪ್ರತಿ ಮುಂಜಾನೆ ಸೈಕಲ್ ತುಳಿಯುತ್ತಾ ಹೊರಟಂತೆ, ಭಾವೇಶ ಅವರಿಗೆ ಪಕ್ಷಿಗಳ ಸ್ವರ ಕೇಳುತ್ತಿತ್ತು. ಅವುಗಳ ಕಲರವದಿಂದಲೇ ಹೊತ್ತು ಎಷ್ಟಾಯಿತೆಂದು ಅಂದಾಜಾಗುತ್ತಿತ್ತು. ಆದರೆ ಈ ದಿನ ಎಲ್ಲ ನಿಶಬ್ದ. ಸಂಪೂರ್ಣ ಮೌನ. ಜೊತೆಯ ಗೆಳೆಯರಿಗೆ ಬೆಳಗಿನ ಬೆಳಕೂ ಕಾಣುತ್ತಿಲ್ಲ. ಅರೆ ಇದೇನಾಯಿತು ಇವತ್ತು ಎಂದು ಯಾರಿಗೂ ಅರ್ಥವಾಗಲಿಲ್ಲ. ಬಹುಶಃ ಈ ಚಳಿಯ ದಿನಗಳಲ್ಲಿ ಸೂರ್ಯ ತಡವಾಗಿ ಹುಟ್ಟುತ್ತಾನೆ. ಹೀಗೇ ಮಾತನಾಡಿಕೊಂಡು ಮುಂದಕ್ಕೆ ಹೊರಟರು.

ಬಹಳಷ್ಟು ದೂರ ಸೈಕಲ್ ತುಳಿದು ಬಂದಿದ್ದರು. ಮುಂದೆ ಒಂದು ಹಳ್ಳಿ ಕಾಣಿಸಿತು. ಆ ಹಳ್ಳಿಯ ಒಂದು ಮನೆಯ ಹೊರಗಿದ್ದ ಬೆಳಕಿನಲ್ಲಿ ಮೂವರು ಕ್ಷಣ ಕಾಲ ನಿಂತರು. ದಿನೇಶ್ ತನ್ನ ಮುಂಗೈಯಲ್ಲಿ ಕಟ್ಟಿದ್ದ ಗಡಿಯಾರವನ್ನು ನಿಧಾನವಾಗಿ ಗಮನಿಸಿ ನೋಡಿದ. 'ಅರೆ ಇದೀಗ ನಾಲ್ಕೂ ಮುಕ್ಕಾಲು ಗಂಟೆ' – ದಿನೇಶ್ ಉದ್ಗರಿಸಿದಾಗಲೇ, ಅವರಿಗೆ ಅರ್ಥವಾದದ್ದು. ಮುಂಜಾನೆಯ ಮೂರು ಗಂಟೆಯನ್ನು ಐದು ಗಂಟೆ ಎಂದು ಭಾವಿಸಿ ದಿನೇಶ್ ಅವರುಗಳನ್ನು ಎಬ್ಬಿಸಿ ಬಿಟ್ಟಿದ್ದ! ಆ ದಿನ ಬಿಲಾಸ್ಪುರದಿಂದ ಅಂಬಿಕಾಪುರಕ್ಕೆ ಇರುವ ಸುಮಾರು 225 ಕಿ.ಮೀ. ದೂರವನ್ನು ಒಂದೇ ದಿನದಲ್ಲಿ ಸೈಕಲ್ ತುಳಿದು ತಲುಪಿದ್ದರು. ಅಂಬಿಕಾಪುರದಲ್ಲಿ ಆ ರಾತ್ರಿ ತಂಗಿದರು.

ಅಧ್ಯಾಯ–4

## ಜಗವ ಗ್ರಹಿಸುವ ಪರಿ

ಬಿಲಾಸ್ಪುರದಿಂದ ಅಂಬಿಕಾಪುರದ ಹಾದಿಯನ್ನು ಒಂದೇ ದಿನದಲ್ಲಿ ಕ್ರಮಿಸಿ ತಲುಪಿದ್ದು ನಿಜಕ್ಕೂ ಹೊಸ ಅನುಭವವಾಗಿತ್ತು. ಅದರಿಂದ ಭಾವೇಶ್ ಮತ್ತು ಗೆಳೆಯರ ಮನೋಬಲ ಹೆಚ್ಚಿತ್ತು. ಎಲ್ಲಿಲ್ಲದ ಆತ್ಮವಿಶ್ವಾಸ ಮೂಡಿತು. ಇಷ್ಟು ಹೊತ್ತಿಗಾಗಲೆ ಎಲ್ಲಿ ಉಳಿದುಕೊಳ್ಳಬೇಕು, ಎಂತಹ ಜನರೊಡನೆ ಭೇಟಿಯಾಗಬೇಕು, ಊಟ ತಿಂಡಿಯ ಯೋಜನೆ ಹೇಗೆ ಮಾಡಿಕೊಳ್ಳಬೇಕು ಎಂಬೆಲ್ಲ ಅರಿವು ಮೂಡಿತ್ತು. ಯಾವುದಾದರೂ ಹಳ್ಳಿಗೆ ಹೋದರೆ, ಅಲ್ಲಿಯ ಸರಪಂಚರನ್ನು ಭೆಟ್ಟಿಯಾಗುವುದು, ಇಲ್ಲ ಶಾಲೆಯ ಮೂಲಕ ಹಾಯ್ದು ಹೋಗುತ್ತಿದ್ದರೆ, ಅಲ್ಲಿಯ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ತಮ್ಮ ಸೈಕಲ್ ಯಾತ್ರೆಯ ಬಗ್ಗೆ ಅವರಿಗೆ ಹೇಳುವುದು. ಹೀಗೆ ಪ್ರತಿ ದಿನವೂ ಹೊಸ ಹೊಸ ಜನರನ್ನು 'ನೋಡುವುದು', ಅವರಿಗೆ ತಮ್ಮ ಯಾತ್ರೆಯ ಬಗ್ಗೆ ಹೇಳುತ್ತ ಹೇಳುತ್ತಾ, ಭಾವೇಶ್ ಅಂತೂ ಒಳ್ಳೆಯ ವಾಗ್ಮಿಗಳಾಗಿದ್ದರು. ಈಗ ಅವರಿಗೆ ದೊಡ್ಡ ಸಮೂಹದ ಎದುರು ಮಾತನಾಡಲು ಅಷ್ಟು ನಡುಕ ಇರಲಿಲ್ಲ. ತಮ್ಮ ಯಾತ್ರೆಯ ಬಗ್ಗೆ ನಿರರ್ಗಳವಾಗಿ ಮಾತನಾಡಲು ಸಮರ್ಥರಾಗಿದ್ದರು.

ಈ ಸೈಕಲ್ ಯಾತ್ರೆ ಭಾವೇಶ್ ಅವರಿಗೆ ಬಹಳ ಲಾಭದಾಯಕವಾಗಿತ್ತು. ಜನರೊಡನೆ ಸಂಪರ್ಕಿಸುವ ಬಗೆಯನ್ನು ಕಲಿಸಿತ್ತು. ತಮ್ಮ ಯಾತ್ರೆಯ ಉದ್ದೇಶವನ್ನು ಮನಗಾಣಿಸುವಲ್ಲಿ, ತಮಗೆ ಅಗತ್ಯವಿದ್ದ ಸಹಾಯವನ್ನು ಅವರಿಂದ ಪಡೆಯುವಲ್ಲಿ ನುರಿತಿದ್ದರು. ಎಷ್ಟೊಂದು ಊರುಗಳನ್ನು 'ಕಂಡಿದ್ದರು', ಬಗೆ ಬಗೆಯ ಜನರೊಡನೆ ಭೇಟಿ. ಅವರ ಆಚಾರ ವಿಚಾರ ಊಟ ತಿಂಡಿ ಎಲ್ಲದರ ಕಿರು ಪರಿಚಯ ಅವರಿಗಾಗಿತ್ತು. ನಾಲ್ಕು ಗೋಡೆಯ ಮಧ್ಯೆ ಬಂಧಿಯಾಗದೆ ಜಗತ್ತು 'ನೋಡಲು' ಹೊರಟ ಅಂಥ ಯುವಕನ ಸಾಹಸ ಫಲ ಕೊಟ್ಟಿತ್ತು. ಮುಂದೆ ಅವರಿಗೆ ತಮ್ಮ ವಿಚಾರಗಳನ್ನು, ಯೋಜನೆಗಳನ್ನು ಸುಲಲಿತವಾಗಿ ವಿವರಿಸುತ್ತಾ, ಜನರಲ್ಲಿಗೆ ತಲುಪಿಸುವಲ್ಲಿ ಈ ಅನುಭವ ಸಹಾಯಕವಾಗಲಿತ್ತು. ಅಷ್ಟೇ ಅಲ್ಲ, ಅವರಿಗೆ ಯಾರ ಬಳಿ ಮಾತನಾಡಲೂ ಹಿಂಜರಿಕೆ ಇಲ್ಲದೆ, ಎಷ್ಟೇ ಜನರ ಮುಂದೆ ಭಾಷಣ ಮಾಡಲೂ ಅಂಜಿಕೆ ಇಲ್ಲದ ವಾಕ್ ಕೌಶಲವನ್ನು ಕಲಿಸಲಿತ್ತು. ಈ ಸೈಕಲ್ ಯಾತ್ರೆ ಅವರಿಗೆ ಹೊಸ ಹೊಸ ಜನರೊಡನೆ ಸಂಪರ್ಕಿಸುವ ಬಲು ದೊಡ್ಡ ಅವಕಾಶವನ್ನು ಒದಗಿಸಿತ್ತು.

ಇದೀಗ ಅವರ ಸೈಕಲ್ ಯಾತ್ರೆ, ಅಂಬಿಕಾಪುರದಿಂದ ಪಟ್ನಾಗೆ ಹೊರಟಿತ್ತು. ಮತ್ತೊಮ್ಮೆ ಅವರ ಸೈಕಲ್ ಕೈಕೊಟ್ಟಿತು. ಪಟ್ನಾ ತಲುಪಲು ಸ್ವಲ್ಪವೇ ಸಮಯವಿತ್ತು. ಅಚಾನಕ್ಕಾಗಿ ಪುರುಷೋತ್ತಮನ ಸೀಟಿನ ಕೆಳಗಿನ ಜೋಡಣೆಯಲ್ಲಿದ್ದ ಬೆಸುಗೆ ಕಿತ್ತು ಬಂದಿತು. ಸೈಕಲನ್ನು ನೂಕಿಕೊಂಡು, ಪಟ್ನಾದ ಬಳಿಯ ಒಂದು ಧರ್ಮಶಾಲೆಗೆ ತಲುಪಿದರು. ಆ ರಾತ್ರಿ ಅಲ್ಲಿಯೇ ಕಳೆದರು. ಮರುದಿನ ಬೆಳಗು ಹರಿಯುತ್ತಿದ್ದಂತೆ ಪಟ್ನಾ ನಗರದಲ್ಲಿ ಬಿ.ಎಸ್.ಎ ಕಂಪನಿಯ ಸೈಕಲ್ ಅಂಗಡಿ ಹುಡುಕತೊಡಗಿದರು. ಇಂತಹ ದೊಡ್ಡ ಪಟ್ಟಣದಲ್ಲಿ ಕಂಪನಿಯ ಅಂಗಡಿ ಹುಡುಕುವುದು ಸುಲಭವಿರಲಿಲ್ಲ. ಆದರೆ ರಿಪೇರಿಗೆ ಬೇರೆ ಮಾರ್ಗ ಕಾಣಲಿಲ್ಲ. ಹೀಗೇ ಅಲೆಯುತ್ತಾ ಒಂದು ಸೈಕಲ್ ಅಂಗಡಿಗೆ ಬಂದರು. ಆ ಅಂಗಡಿಯವನಿಂದ, ಇದೇ ಕಳೆದ ತಿಂಗಳು ಒಂದು ಬಿ.ಎಸ್.ಎ. ಕಂಪನಿಯ ಡಿಪೋ ಪಟ್ನಾದಲ್ಲಿ ತೆರೆದಿರುವುದು ತಿಳಿದು ಬಂದಿತು. ಆ ಡಿಪೋ ಹುಡುಕಿ ಹೊರಟರು.